Linga Bhairavi

# ಮರಣ ಹೊಂದಿದವರಿಗಾಗಿ ಮಾಡುವ ಪ್ರಕ್ರಿಯೆಗಳು

## ಆನ್‌ಲೈನ್‌ನಲ್ಲಿ ಅಥವಾ ಖುದ್ದಾಗಿ ಸಲ್ಲಿಸಿ

"ಜೀವಂತವಾಗಿರುವವರೆಡೆಗೆ ನಮಗೆ ಜವಾಬ್ದಾರಿಗಳಿರುವಂತೆಯೇ, ಮರಣ ಹೊಂದಿರುವವರೆಡೆಗೂ ನಮಗೆ ಜವಾಬ್ದಾರಿಗಳಿವೆ. ಸಾವು ಸಂಭವಿಸಿದ ನಿರ್ದಿಷ್ಟ ಸಮಯದೊಳಗೆ, ಸಾವನ್ನಪ್ಪಿದವರ ಮೇಲೆ ಪ್ರಭಾವ ಬೀರಲು ಅವಕಾಶವಿದೆ."

– ಸದ್ಗುರು



## ಇಲ್ಲಿಯೂ ಮತ್ತು ಮುಂದೆಯೂ ಜೀವದತ್ತ ಸಾಗಿ

ನಮ್ಮನ್ನು ಅಗಲಿದವರಿಗಾಗಿ ಕೆಲವು ಪ್ರಕ್ರಿಯೆಗಳನ್ನು ನಡೆಸಲು ಕೊಯಂಬತ್ತೂರಿನ ಲಿಂಗ ಭೈರವಿಯನ್ನು ಶಕ್ತಿಯ ನೆಲೆಯಾಗಿ ಬಳಸಲಾಗುತ್ತದೆ. ಈ ಪ್ರಕ್ರಿಯೆಗಳು, ಜೀವಂತವಿರುವ ಮತ್ತು ಅಗಲಿದವರ ಒಳಿತಿಗಾಗಿ, ರಕ್ತ ಸಂಬಂಧಿತರ ಋಣಾನುಬಂಧವನ್ನು ಅಳಿಸಲು ನಡೆಸಲಾಗುತ್ತದೆ.

**ಸದ್ಗುರು:** "ಭಾರತೀಯ ಸಂಸ್ಕೃತಿಯಲ್ಲಿ, ಯಾರಾದರೂ ಮೃತಪಟ್ಟ ನಂತರ, ನಾವು ಯಾವಾಗಲೂ ಋಣಾನುಬಂಧವನ್ನು ಅಳಿಸಿಹಾಕಲು ಬಯಸುತ್ತೇವೆ ಏಕೆಂದರೆ ನೆನ್ನೆಗೆ ತನ್ನದೇ ಆದ ಶಕ್ತಿ ಇದೆ ಎಂದು ನಮಗೆ ತಿಳಿದಿದೆ. ನಿಮ್ಮನ್ನು ನೀವು ಇದರಿಂದ ಮುಕ್ತಗೊಳಿಸಿಕೊಳ್ಳದಿದ್ದರೆ, ನೆನ್ನೆ ನಿಮ್ಮ ನಾಳೆಯನ್ನು ಆಳುತ್ತದೆ. ಈ ನೆನಪಿನ ಅಚ್ಚುಗಳು ನಿಮ್ಮ ಮನಸ್ಸಿನಲ್ಲಿ ಅಷ್ಟೇ ಅಲ್ಲ, ನಿಮ್ಮ ಶರೀರ ಹಾಗೂ ಶಕ್ತಿಗಳಲ್ಲಿಯೂ ಇರುತ್ತವೆ. ಆದ್ದರಿಂದ, ಮರಣ ನಂತರದ ಪ್ರಕ್ರಿಯೆಗಳ ಒಂದು ಮುಖ್ಯ ಉದ್ದೇಶವೇನೆಂದರೆ, ನೀವು ಇದರಿಂದ ಮುಕ್ತರಾಗುವುದು."



# ಕಾಲಭೈರವ ಕರ್ಮ

ಈ ಪ್ರಕ್ರಿಯೆಯನ್ನು ಮರಣಾನಂತರದ ಒಂದು ನಿರ್ದಿಷ್ಟ ಅವಧಿಯಲ್ಲಿ ದೇವಿಯ ಅನುಗ್ರಹವನ್ನು ಆಹ್ವಾನಿಸುವ ಮೂಲಕ ನಡೆಸಲಾಗುತ್ತದೆ ಮತ್ತು ಇದನ್ನು ಲಿಂಗ ಭೈರವಿ ಹಾಗೂ ನಿರ್ಕಾಯ ಸ್ಥಾನ (ಈ ಉದ್ದೇಶಕ್ಕಾಗಿ ವಿನ್ಯಾಸಗೊಳಿಸಲಾದ ನೀರಿನ ಕೊಳ) ಎರಡೂ ಸ್ಥಳಗಳಲ್ಲಿ ನಡೆಸಲಾಗುತ್ತದೆ. ಇದು ಸಹಜವಾಗಿ ಮತ್ತು ಅಸಹಜವಾಗಿ ಮರಣ ಹೊಂದಿದವರಲ್ಲಿ ಒಂದು ರೀತಿಯ ನಿರಾಳತೆ ಮತ್ತು ಹಿತವಾದ ಪರಿವರ್ತನೆಯನ್ನು ತರುತ್ತದೆ.

## ಮರಣದ ಸ್ವರೂಪವನ್ನು ಆಧರಿಸಿ ಸಮಯಾವಧಿ

ಮರಣದ ನಂತರ ಒಂದು ನಿರ್ದಿಷ್ಟ ಅವಧಿಯೊಳಗೆ ಈ ಪ್ರಕ್ರಿಯೆಯನ್ನು ಪೂರ್ಣಗೊಳಿಸಬೇಕು, ಇದು 14 ರಿಂದ 90 ದಿನಗಳವರೆಗೆ ಅಥವಾ ಕೆಲವೊಮ್ಮೆ ಮರಣದ ಸ್ವರೂಪವನ್ನು ಆಧರಿಸಿ ಅನಿರ್ದಿಷ್ಟ ಕಾಲಾವಧಿಯವರೆಗೆ ಇರುತ್ತದೆ. ವಿವರವಾದ ಸಮಯಾವಧಿಗಳನ್ನು ವೆಬ್‌ಸೈಟ್‌ನಲ್ಲಿ ಪಟ್ಟಿ ಮಾಡಲಾಗಿದೆ.



## ಬೇಕಾಗಿರುವುದು:

- ಮೃತರ ಫೋಟೋ (ಅವರು ಜೀವಂತವಿದ್ದಾಗ ತೆಗೆದದ್ದು)
- ಬಟ್ಟೆ (ಒಳಉಡುಪು, ಸೀರೆ ಮತ್ತು ಮರಣದ ಸಮಯದಲ್ಲಿ ಧರಿಸಿದ್ದ ಬಟ್ಟೆಗಳನ್ನು ಹೊರತುಪಡಿಸಿ)
- ಸಾಧ್ಯವಾದಲ್ಲಿ, ಮೃತರ ರಕ್ತ ಸಂಬಂಧಿಯೊಬ್ಬರು ಈ ಪ್ರಕ್ರಿಯೆಯಲ್ಲಿ ಭಾಗವಹಿಸಬೇಕು
- ಗರ್ಭಾವಸ್ಥೆಯ 48 ದಿನಗಳ ನಂತರ ಸಂಭವಿಸುವ ಸ್ಟಿಲ್-ಬರ್ತ್ ಅಥವಾ ಗರ್ಭಪಾತಗಳಿಗೆ, ಆ ಗರ್ಭಾವಸ್ಥೆಯ ಸಮಯದಲ್ಲಿ ತೆಗೆದ ತಾಯಿಯ ಫೋಟೋ. ಅದು ಇಲ್ಲದಿದ್ದರೆ, ತಾಯಿಯ ಬೇರೆ ಯಾವುದೇ ಫೋಟೋ ಬೇಕಾಗುತ್ತದೆ.

## ಸೂಚನೆ:

- ಪ್ರಕ್ರಿಯೆಯ ನಂತರ ಮೃತರ ಕುಟುಂಬಕ್ಕೆ ಅಸ್ಥಿ ಪ್ರಸಾದವನ್ನು ನೀಡಲಾಗುತ್ತದೆ.
- ಕಾಲಭೈರವ ಕರ್ಮವು ಕೇವಲ ಮೃತರಾದವರಿಗೆ ಮಾತ್ರ, ಜೀವಂತ ಇರುವವರಿಗೆ ಅಲ್ಲ.
- ಈ ಪ್ರಕ್ರಿಯೆಯನ್ನು ಪ್ರಾಣಿಗಳು ಅಥವಾ ಸಾಕುಪ್ರಾಣಿಗಳಿಗೆ ಮಾಡಲಾಗುವುದಿಲ್ಲ.

ಹೆಚ್ಚಿನ ಮಾಹಿತಿಗಾಗಿ QR code ಅನ್ನು ಸ್ಕ್ಯಾನ್ ಮಾಡಿ
bhairavi.co/karma



# ಕಾಲಭೈರವ ಶಾಂತಿ

ಮರಣದ ನಂತರ ಯಾವುದೇ ಸಮಯದಲ್ಲಿ ಮತ್ತು ಮುಖ್ಯವಾಗಿ ಕಾಲಭೈರವ ಕರ್ಮದ ಗಡುವು ಮೀರಿದ್ದರೆ ಇದನ್ನು ಮಾಡಬಹುದು. ಪ್ರತಿ ಅಮವಾಸ್ಯೆಯಂದು ಮಧ್ಯರಾತ್ರಿಯ ಸಂಧ್ಯಾಕಾಲದಲ್ಲಿ ನಡೆಸಲಾಗುವ ಈ ಪ್ರಕ್ರಿಯೆಯನ್ನು ಪ್ರತಿ ತಿಂಗಳಿಗೊಮ್ಮೆ ಅಥವಾ ಪ್ರತಿ ವರ್ಷಕ್ಕೊಮ್ಮೆ ಮಾಡಬಹುದು.
ವಾರ್ಷಿಕ ಕಾಲಭೈರವ ಶಾಂತಿಯನ್ನು ಮಹಾಲಯ ಅಮಾವಾಸ್ಯೆಯಂದು ಸಹ ನಡೆಸಲಾಗುತ್ತದೆ.

## ಅವಶ್ಯಕತೆಗಳು:

- ಮೃತರ ಒಬ್ಬರೇ ಇರುವ ( ಗುಂಪಿನಲ್ಲಿ ಅಲ್ಲ ) ಫೋಟೋ (ಅವರು ಜೀವಂತವಿದ್ದಾಗ ತೆಗೆದದ್ದು)
- ಮೃತರ ಹೆಸರು, ಜನ್ಮ ದಿನಾಂಕ ಅಥವಾ ನಿಖರವಾದ ಜನ್ಮ ವರ್ಷ, ಮರಣ ದಿನಾಂಕ ಅಥವಾ ನಿಖರವಾದ ಮರಣದ ವರ್ಷ. ಇದು ಯಾವುದೂ ಇಲ್ಲದಿದ್ದ ಪಕ್ಷದಲ್ಲಿ, ಮೃತರ ತಾಯಿ ಮತ್ತು ತಂದೆಯರ ಹೆಸರುಗಳು
- ಗರ್ಭಾವಸ್ಥೆಯ 48 ದಿನಗಳ ನಂತರ ಸಂಭವಿಸುವ ಸ್ಟಿಲ್-ಬರ್ತ್ ಅಥವಾ ಗರ್ಭಪಾತಗಳಿಗೆ, ಗರ್ಭಾವಸ್ಥೆಯ ಸಮಯದಲ್ಲಿ ತೆಗೆದ ತಾಯಿಯ ಫೋಟೋ. ಅದು ಇಲ್ಲದಿದ್ದರೆ, ತಾಯಿಯ ಬೇರೆ ಯಾವುದೇ ಫೋಟೋ ಬೇಕಾಗುತ್ತದೆ.

## ಸೂಚನೆ:

- ಗರ್ಭಿಣಿಯರು ಅಥವಾ ಋತುಚಕ್ರದಲ್ಲಿರುವ ಮಹಿಳೆಯರು ಕಾಲಭೈರವ ಶಾಂತಿ ಪ್ರಕ್ರಿಯೆಗೆ ಬರದಿರುವುದು ಒಳ್ಳೆಯದು ಏಕೆಂದರೆ ಪ್ರಕ್ರಿಯೆಯಲ್ಲಿ ಭಾಗವಹಿಸುವುದು ಅವರ ಯೋಗಕ್ಷೇಮಕ್ಕೆ ಅನುಕೂಲಕರವಲ್ಲ.
- ಈ ಪ್ರಕ್ರಿಯೆಯನ್ನು ಮುಂದಿನ 12 ತಿಂಗಳು ಅಥವಾ 10 ವರ್ಷಗಳವರೆಗೆ ನಡೆಸಲು ಒಂದೇ ಬಾರಿ ನೋಂದಾಯಿಸಬಹುದು.

ಹೆಚ್ಚಿನ ಮಾಹಿತಿಗಾಗಿ QR code ಅನ್ನು ಸ್ಕ್ಯಾನ್ ಮಾಡಿ
bhairavi.co/shanti

# ಅಗ್ನಿ ಅರ್ಪಣೆ

ನಮ್ಮ ಜೀವನವನ್ನು ಪೋಷಿಸಿದ, ನಮಗೆ ತಿಳಿದಿರುವ ಮತ್ತು ತಿಳಿದಿಲ್ಲದ ಹಿಂದಿನ ತಲೆಮಾರುಗಳಿಗೆ ಕೃತಜ್ಞತೆಯ ಅಭಿವ್ಯಕ್ತಿಯಾಗಿ ಲಿಂಗ ಭೈರವಿಗೆ ಅರ್ಪಿಸುವ ಪವಿತ್ರ ಅಗ್ನಿ ಅರ್ಪಣೆ. ಹೆಸರು ಮತ್ತು ವಿವರಗಳು ಗೊತ್ತಿಲ್ಲದೆ ಕಾಲಗರ್ಭದಲ್ಲಿ ಕಳೆದುಹೋದವರನ್ನೂ ಸೇರಿದಂತೆ, ನಮ್ಮ ಎಲ್ಲಾ ಅಗಲಿದ ಸಂಬಂಧಿಕರಿಗೆ ಅಗ್ನಿ ಅರ್ಪಣೆಯನ್ನು ಸಲ್ಲಿಸಬಹುದು.

ಈ ಅರ್ಪಣೆಯು ಮಹಾಲಯ ಅಮಾವಾಸ್ಯೆ (ಸೆಪ್ಟೆಂಬರ್-ಅಕ್ಟೋಬರ್), ಮೌನಿ ಅಮಾವಾಸ್ಯೆ (ಜನವರಿ-ಫೆಬ್ರವರಿ) ಮತ್ತು ಆಷಾಢ ಅಮಾವಾಸ್ಯೆ (ಜುಲೈ-ಆಗಸ್ಟ್) ಗಳಲ್ಲಿ ಲಭ್ಯವಿದೆ.

ಹೆಚ್ಚಿನ ಮಾಹಿತಿಗಾಗಿ QR code ಅನ್ನು ಸ್ಕ್ಯಾನ್ ಮಾಡಿ

bhairavi.co/agni




# ಮಹಾಲಯ ಅಮಾವಾಸ್ಯೆ

ಸಾಂಪ್ರದಾಯಿಕವಾಗಿ ಇದು ಪಿತೃ ಪಕ್ಷದ ಸಮಾಪ್ತಿಯ ದಿನ, ಹಾಗಾಗಿ ಬಹಳ ಮಹತ್ವದ ದಿನ. ಈ ಸಮಯ, ನಮ್ಮ ಜೀವನಕ್ಕೆ ಕೊಡುಗೆ ನೀಡಿದ ಹಿಂದಿನ ಎಲ್ಲಾ ತಲೆಮಾರುಗಳಿಗೆ ಗೌರವ ಸೂಚಿಸಲು ಅರ್ಪಣೆಗಳನ್ನು ಮಾಡುವ ಸಮಯ. ಲಿಂಗ ಭೈರವಿಯ ಸಾನ್ನಿಧ್ಯದಲ್ಲಿ ಮಹಾಲಯ ಅಮಾವಾಸ್ಯೆಯಂದು ವಿಶೇಷ ವಾರ್ಷಿಕ ಕಾಲಭೈರವ ಶಾಂತಿಯನ್ನು ನಡೆಸಲಾಗುತ್ತದೆ.

"ಮಹಾಲಯ ಅಮಾವಾಸ್ಯೆಯು ವಂಶವಾಹಿಗಳ ಹಂತದಲ್ಲಿ ನಮ್ಮ ಪೂರ್ವಜರಿಂದ ಒಂದು ಅಂತರವನ್ನು ತಂದುಕೊಳ್ಳುವ ದಿನವಾಗಿದೆ. ನಾವು ಅವರಿಗೆ ಮತ್ತು ಅವರ ಕೊಡುಗೆಗಳಿಗೆ ಕೃತಜ್ಞರು, ಆದರೆ ನಾವು ನಮ್ಮದೇ ಆದ ಜೀವನವನ್ನು ಜೀವಿಸುವಂತಾಗಲು ಅವರ ಪ್ರಭಾವವನ್ನು ಮಿತಗೊಳಿಸಬಯಸುತ್ತೇವೆ."
– ಸದ್ಗುರು

ಈ ದಿನದಂದು ಆನ್‌ಲೈನ್‌ನಲ್ಲಿ ಅಥವಾ ಖುದ್ದಾಗಿ, ದೇವಿಗೆ ವಿವಿಧ ಅರ್ಪಣೆಗಳನ್ನು ಸಲ್ಲಿಸಲು ಅವಕಾಶವಿದೆ.

ಹೆಚ್ಚಿನ ಮಾಹಿತಿಗಾಗಿ QR code ಅನ್ನು ಸ್ಕ್ಯಾನ್ ಮಾಡಿ
bhairavi.co/ma



# ಅನುಭೂತಿಗಳು

"ನಾನು ನನ್ನ ಒಬ್ಬನೇ ಮಗನನ್ನು ಕಳೆದುಕೊಂಡೆ. ನಾನು ಚಿಕ್ಕವಳಿದ್ದಾಗ ಬಡತನದಲ್ಲಿ ಬದುಕಿದ್ದೆ. ಇವತ್ತು ನನ್ನ ಹತ್ರ ನನ್ನ ಮಗ ಚೆನ್ನಾಗಿ ಬದುಕಲು ಬೇಕಾದ ಮನೆ, ಹಣ ಎಲ್ಲಾ ಇದೆ ಆದರೆ ಅವನೇ ಇಲ್ಲ. ಒಬ್ಬ ತಾಯಿಯಾಗಿ, ಈ ನಷ್ಟದಿಂದ ನನ್ನ ಮನಸ್ಸು ಖಾಲಿ ಮತ್ತು ಭಾರವಾಗಿತ್ತು. ನಾನು ಯಾವತ್ತೂ ಪೂಜಾವಿಧಿಗಳನ್ನು ಮಾಡಿಲ್ಲದಿದ್ದರೂ, ನನ್ನ ಮಗನ ಆತ್ಮ ಶಾಂತಿಗಾಗಿ ಏನಾದರೂ ಮಾಡಬೇಕು ಅನಿಸಿತು. ಕಾಲಭೈರವ ಕರ್ಮವನ್ನು ಮಾಡಿದ್ದರಿಂದ ಅವನಿಗೆ ಶಾಂತಿಯುತ ವಾತಾವರಣ ಸೃಷ್ಟಿಯಾಯಿತು, ಮತ್ತು ಅದರ ನಂತರ ನನಗೆ  ಸ್ವಲ್ಪ ಶಾಂತಿ ಅನಿಸುತ್ತಿದೆ. ನನ್ನ ಕುಟುಂಬಕ್ಕೂ ಸಹ ನನ್ನ ಮುಖದಲ್ಲಿನ ಬದಲಾವಣೆ ಕಾಣಿಸುತ್ತಿದೆ."

**ಶ್ರೀಮತಿ ಅರುಣ ಕಂದಸಾಮಿ, ಕರೂರು**

"ನಮ್ಮ ತಾಯಿ ಆತ್ಮಕ್ಕೆ ಶಾಂತಿ ಸಿಗಲಿ ಅನ್ನೋದು ನಮ್ಮ ಆಸೆ ಆಗಿತ್ತು. ಹಾಗಾಗಿ ಕಾಲಭೈರವ ಕರ್ಮ ಮಾಡಿದೆವು. ಪ್ರಕ್ರಿಯೆಗಳನ್ನು ಮಾಡುವಾಗ ನನ್ನ ದೇಹ ಮತ್ತು ಮನಸ್ಸು ತುಂಬಾ ಹಗುರವಾದಂತೆ ಅನಿಸಿತು. ಸಾಮಾನ್ಯವಾಗಿ ಗಂಡು ಮಕ್ಕಳು ಮಾತ್ರ ಈ ಕರ್ಮವನ್ನು ಮಾಡಬಹುದು, ಆದರೆ ಇಲ್ಲಿ ಹೆಣ್ಣು ಮಕ್ಕಳಿಗೂ ಈ ಅವಕಾಶ ನೀಡಿದ್ದಾರೆ. ನನ್ನ ತಾಯಿಗಾಗಿ ನಾನು ಏನಾದರೂ ಮಾಡುವಂತಾಯಿತು ಎಂಬ ತೃಪ್ತಿ ನನಗಿದೆ."

**ಶ್ರೀಮತಿ ಎಲ್. ಲಕ್ಷ್ಮಿ, ಚೆನ್ನೈ**

ಕೊಯಂಬತ್ತೂರಿನ ಈಶ ಯೋಗ ಕೇಂದ್ರದಲ್ಲಿ ರೂಮ್ ಬುಕ್ ಮಾಡಲು:
**cottage.isha.in**

**Shri Yogini Trust,**
Linga Bhairavi, Poondi,
Coimbatore - 641114, India

info@lingabhairavi.org
+91 83000 83111
lingabhairavi.org